**ಮಲಪ್ರಭಾನದಿಗೆ ಮಹದಾಯಿ ನದಿಯ ಜೋಡಣೆ**

637 - ಶ್ರೀ ತೈಲಪ್ಪ ಬಿದೂರೂರ್ (ರೋಣ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಮಹದಾಯಿ ನದಿಯನ್ನು ಮಲಪ್ರಭಾ ನದಿಗೆ ಜೋಡಣೆ ಮಾಡುವ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆಯೇ.*

*ಆ) ಹಾಗಿದ್ದಲ್ಲಿ, ಈ ಯೋಜನೆಯ ರೂಪ ರೇಷಗಳಾವುವು ಹಾಗೂ ಎಂದಿನಿಂದ ಈ ಯೋಜನೆಯನ್ನು ಪ್ರಾರಂಭಿಸಿದಲಾಗುವುದು?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಮಹದಾಯಿ ನದಿ ನೀರನ್ನು ಮಲಪ್ರಭಾ ಜಲಾಶಯಕ್ಕೆ ಹಾಯಿಸುವ ಪ್ರಸ್ತಾಪವೆಯು ಪರಿಶೀಲನೆಯಲ್ಲಿದೆ.

ಆ) ಈ ಯೋಜನೆಯು ಕೆಳಗೆ ಸೂಚಿಸಿರುವಂತೆ ಒಟ್ಟು 9 ಟಿಎಂಸಿ ಪ್ರಮಾಣದ ನೀರನ್ನು ಮಲಪ್ರಭಾ ಜಲಾಶಯಕ್ಕೆ ಹಾಯಿಸುವ ಉದ್ದೇಶ ಹೊಂದಿದೆ.

1) ಕರ್ನಾಟಕ ವಿದ್ಯುತ್ ನಿಗಮವು ಮಹದಾಯಿ ನದಿಗೆ ಅಡ್ಡಲಾಗಿ ಖಾನಾಪುರ ತಾಲ್ಲೂಕಿನ ಕೊಟ್ನ ಬಳಿ ಉದ್ದೇಶಿಸಿರುವ ಜಲಾಶಯದಿಂದ 4 ಟಿಎಂಸಿ.

2) ಖಾನಾಪುರ ತಾಲ್ಲೂಕಿನಲ್ಲಿ ಪಶ್ಚಿಮಮುಖಿ ನದಿಗಳಾದ ಕಳಸ, ಹಲ್ತಾರ ಮತ್ತು ಪೋಟ್ಣಿ ನದಿಗಳಿಗೆ ಅಡ್ಡಲಾಗಿ ಉದ್ದೇಶಿಸಿರುವ ಜಲಾಶಯ ಗಳಿಂದ ೦೫ ಟಿಎಂಸಿ.

1993-94ನೇ ಸಾಲಿನ ದರಗಳ ಪ್ರಾಕಾರ ಈ ಯೋಜನೆಗೆ ತಗಲುವ ವೆಚ್ಚವನ್ನು 136 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ.

ಮಹದಾಯಿ ನದಿಯು ಕರ್ನಾಟಕ ಮತ್ತು ಗೋವಾ ರಾಜ್ಯಗಳಿಗೆ ಸೀರಿರುವ ಅಂತರರಾಜ್ಯ ನದಿ ಆಗಿರುವುದರಿಂದ, ಗೋವಾ ಸರ್ಕಾರದ ಸಹಮತಿ ದೊರೆತ ನಂತರವೇ ಈ ಯೋಜನೆಯ ಕೆಲಸವನ್ನು ಪ್ರಾರಂಭಿಸಬುಹುದಾಗಿದೆ.

**ರೋಣದಲ್ಲಿ ಉಪ ಖಜಾನೆ ಸ್ಥಾಪನೆ.**

682 - ಶ್ರೀ ಶೈಲಪ್ಪ ಬಿದನೂರು (ರೋಣ) : ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ತಾಲ್ಲೂಕು ಕೇಂದ್ರಗಳನ್ನು ಹೊರತುಪಡಿಸಿ ಇತರೆ ಸ್ಥಳಗಳಲ್ಲಿ ಎಷ್ಟು ಸ್ಥಳದಲ್ಲಿ ಉಪಖಜಾನೆ ಕಛೇರಿಗಳು ಇವೆ, (ಎಲ್ಲೆಲ್ಲಿ ಇವೆ, ವಿವರ ನೀಡುವುದು)*

*ಆ) ರೋಣ ಮತಕ್ಷೇತ್ರದ ಗಜೇಂದ್ರಗಡ ನಗರದಲ್ಲಿ ಸುಮಾರು ೩೫,೦೦೦ ಜನಸಂಖ್ಯೆ ಒಳಗೊಂಡಿದ್ದು ಬೆಳೆಯುತ್ತಿರುವ ವಾಣಿಜ್ಯೋದ್ಯಮ ನಗರ ಆಗಿದ್ದು, ಸರ್ಕಾರಿ ಕಾಲೇಜುಗಳು, ಕಛೇರಿಗಳು ಅಲ್ಲಿ ಇದ್ದು, ತಾಲ್ಲೂಕು ಕೇಂದ್ರದಿಂದ 30 ಕಿ. ಮೀ. ದೂರದಲ್ಲಿರುವುದರಿಂದಲೂ ಹಾಗೂ ಸುತ್ತಮುತ್ತಲಿನ ಸುಮಾರು 30-40 ಹಳ್ಳಿಗಳ ಅನುಕೂಲಕ್ಕಾಗಿ ಉಪಖಜಾನೆ ಕಛೇರಿಯ ಅವಶ್ಯಕತೆ ಇರುವುದರಿಂದ ಕ್ರಮ ಕೈಗೊಳ್ಳುವರೇ?*

ಶ್ರೀ ಸಿದ್ದರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) :

ಅ) 35 (ಸ್ಥಳಗಳ ವಿವರಗಳ ಪಟ್ಟಿ ಲಗತ್ತಿಸಿದೆ).

ಆ) ರೋಣ ತಾಲ್ಲೂಕಿನ ಗಜೇಂದ್ರಗಡ ಕೇಂದ್ರದಲ್ಲಿ ನೇರವಾಗಿ ಬ್ಯಾಂಕಿಂಗ್ ಉಪಖಜಾನೆಯನ್ನು ಪ್ರಾರಂಭಿಸಬೇಕಾಗಿರುವುದರಿಂದ ಸದರಿ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೆನರಾ ಬ್ಯಾಂಕ್ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್,